### ಕೃಷಿಕರಿಗೆ ಡಾ. ವಿಜಯ ಸಂಕೇಶ್ವರ ಸಲಹೆ | ಜಿಕೆವಿಕೆಯಲ್ಲಿ ವಿಜಯವಾಣಿ ಅಂಕಣ ರೈತಮಿತ್ರದ 3ನೇ ವಾರ್ಷಿಕೋತ್ಸವ

# ಬೆಳೆದ ಬೆಳೆ ಸ್ವಯಂ ಮಾರಾಟದಿಂದ ಆದಾಯ ವೃದ್ಧಿ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು

ರೈತರು ಬೆಳೆದ ಬೆಳೆಯನ್ನು ಮಾರುಕಟ್ಟೆಯಲ್ಲಿ ಸ್ವಯಂ ಮಾರಾಟ ಮಾಡುವುದರಿಂದ ಹೆಚ್ಚಿನ ಆದಾಯ ಪಡೆಯಲು ಸಾಧ್ಯವಿದೆ ಎಂದು ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ.ವಿಜಯ ಸಂಕೇಶ್ವರ ಪ್ರತಿಪಾದಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕ್ಯಾಂಪಸ್ ಜಿಕೆವಿಕೆಯಲ್ಲಿ ಸೋಮವಾರ ವಿವಿಯ ಕೃಷಿ ತಂತ್ರಜ್ಞಾನ ಮಾಹಿತಿ ಕೇಂದ್ರ (ಎಟಿಐಸಿ) ಮತ್ತು ಖುಷ್ಕಿ ಬೇಸಾಯ ಪ್ರಾಯೋಜನೆ ವಿಭಾಗವು ಆಯೋಜಿಸಿದ್ದ 'ವಿಜಯವಾಣಿ' ಪತ್ರಿಕೆಯ ಪ್ರಶ್ನೋತ್ತರ ಅಂಕಣ 'ರೈತ ಮಿತ್ರ' 3ನೇ ವಾರ್ಷಿಕೋತ್ಸವ ಹಾಗೂ 'ಕ್ಯಾಚ್ ದಿ ರೈನ್' ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಕೆಲ ರೈತರು ಬೆಳೆಯನ್ನು ತಾವೇ ಮಾರಾಟ ಮಾಡಲು ಹಿಂಜರಿಯುತ್ತಾರೆ. ಇನ್ನೂ ಕೆಲವರು ನಾಚಿಕೆಪಡುತ್ತಾರೆ. ಆದರೆ, ಯಾವ ರೈತ ತಾನು ಬೆಳೆದ ಉತ್ಪನ್ನವನ್ನು ಸ್ವಯಂ ಮಾರುಕಟ್ಟೆಗೆ ಸಾಗಿಸಿ ಮಾರಾಟ ಮಾಡುತ್ತಾನೋ ಅಂತಹ ಕೃಷಿಕನು 2-3 ಪಟ್ಟು ಆದಾಯ ಪಡೆಯುತ್ತಾನೆ. ಒಮ್ಮೆ ಮುಧೋಳ ಪ್ರವಾಸದಲ್ಲಿದ್ದಾಗ ದ್ರಾಕ್ಷಿ ತೋಟ ಹೊಂದಿದ್ದ ಶಿಕ್ಷಕರು ತಮ್ಮ ಉತ್ಪನ್ನವನ್ನು ರಸ್ತೆಬದಿ ನಿಂತು ಮಾರುತ್ತಿದ್ದನ್ನು ಕಂಡು ಅಚ್ಚರಿಗೆ ಒಳಗಾದೆ. ಈ ಬಗ್ಗೆ ವಿಚಾರಿಸಿದಾಗ ತೋಟದಲ್ಲೇ ಮಾರಾಟ ಮಾಡಿದರೆ 2 ಲಕ್ಷ ರೂ. ಸಿಗುತ್ತದೆ. 15 ದಿನ ರಸ್ತೆಬದಿ ನಿಂತು ಮಾರಿದರೆ 8 ಲಕ್ಷ ರೂ. ಸಿಗುತ್ತದೆ ಎಂದರು. ಆದಾಯ ವೃದ್ಧಿಗೆ ಇರುವ ದಾರಿಗಳನ್ನು ಕಂಡುಕೊಂಡಲ್ಲಿ ರೈತರಿಗೆ ಹೆಚ್ಚಿನ ಲಾಭ ಸಿಗುವುದು ನಿಶ್ಚಿತ ಎಂದು ಡಾ.ವಿಜಯ ಸಂಕೇಶ್ವರ ತಿಳಿಸಿದರು.

**ವೆಚ್ಚ ಕಡಿಮೆ ಮಾಡಿ ಆದಾಯ ಹೆಚ್ಚಿಸಿಕೊಳ್ಳಿ:** ಬಹಳಷ್ಟು ರೈತರು ಕೃಷಿಯಲ್ಲಿ ಲಾಭ ಮಾಡಲು ಹೋಗಿ ಸಾಲದ ಹೊರೆಯಿಂದ ಕೈಸುಟ್ಟುಕೊಳ್ಳುತ್ತಾರೆ. ಇದರ ಬದಲು ಆರಂಭದಲ್ಲಿ ಕಡಿಮೆ ವೆಚ್ಚದಲ್ಲಿ ವ್ಯವಸಾಯ ಕೈಗೊಂಡು ಆದಾಯ ವೃದ್ಧಿಸಿಕೊಳ್ಳುವ ಚಾಕಚಕ್ಯತೆ ಮೈಗೂಡಿಸಿಕೊಳ್ಳಬೇಕು. ಇದರಿಂದ ಸಣ್ಣ ಹಿಡುವಳಿದಾರರು ಯಾವುದೇ ಸಮಸ್ಯೆಗೆ ಒಳಗಾಗದೆ ದೀರ್ಘ ಕಾಲದವರೆಗೆ ಕೃಷಿಯಲ್ಲೇ ಮುಂದುವರಿಯಬಹುದು ಎಂದು ಡಾ. ವಿಜಯ ಸಂಕೇಶ್ವರ ಸಲಹೆ ನೀಡಿದರು.



'ವಿಜಯವಾಣಿ' ಪತ್ರಿಕೆಯ ಪ್ರಶ್ನೋತ್ತರ ಅಂಕಣ 'ರೈತ ಮಿತ್ರ' ಮಾಹಿತಿ ಹೊತ್ತಗೆಯನ್ನು ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ. ವಿಜಯ ಸಂಕೇಶ್ವರ, ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ್ ಅನಾವರಣಗೊಳಿಸಿದರು. ವಿವಿ ಕುಲಸಚಿವ ಡಾ. ಕೆ.ಸಿ.ನಾರಾಯಣಸ್ವಾಮಿ, ಡಾ. ಕೆ.ಪಿ.ರಘುಪ್ರಸಾದ್, ಡಾ. ಶಿವರಾಮು, ಡಾ. ಮೂಡಲಗಿರಿಯಪ್ಪ, ಡಾ. ಎಂ.ಶಾಲಿನಿ ಇದ್ದರು.

### ಕೃಷಿಕನಾಗುವ ಹೆಬ್ಬಯಕೆ

ನಾವು ಸಾರಿಗೆ ಕ್ಷೇತ್ರದಲ್ಲಿ ತೊಡಗಿಸಿಕೊಂಡಿದ್ದರೂ, ಕೃಷಿ ಬಗ್ಗೆ ಒಲವು ಹೊಂದಿದ್ದೇವೆ. ಜಮೀನು ಖರೀದಿಸಲು ಕಾನೂನಿನಲ್ಲಿ ಅವಕಾಶ ಇಲ್ಲದ ಕಾರಣ ಸಾಧ್ಯವಾಗಿರಲಿಲ್ಲ. ಯಡಿಯೂರಪ್ಪ ಅವರು ಸಿಎಂ ಆಗಿದ್ದಾಗ ಯಾರು ಬೇಕಾದರೂ ಕೃಷಿ ಜಮೀನು ಖರೀದಿಸಲು ಅವಕಾಶ ಮಾಡಿಕೊಟ್ಟ ಬಳಿಕ ನಮಗೂ ಕೃಷಿ ಮಾಡಬೇಕೆಂಬ ಹೆಬ್ಬಯಕೆ ಮೂಡಿದೆ. ಭವಿಷ್ಯದಲ್ಲಿ ಜಮೀನು ಖರೀದಿಸಿ ಸಾವಯವ ಕೃಷಿ ಮಾಡಿ ಇತರರಿಗೆ ಮಾದರಿಯಾಗುವ ಇಚ್ಛೆ ಇದೆ ಎಂದು ಡಾ. ವಿಜಯ ಸಂಕೇಶ್ವರ ತಿಳಿಸಿದರು.

> ಕೃಷಿಯಲ್ಲಿ ದಲ್ಲಾಳಿ ಪದ್ಧತಿ ಹೋಗಲಾಡಿಸಲು ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ರೈತಸ್ನೇಹಿಯಾದ ಕೆಲ ಕಾನೂನುಗಳನ್ನು ಜಾರಿಗೆ ತಂದಿತ್ತು. ಆದರೆ, ಈ ನಿರ್ಧಾರಕ್ಕೆ ಕೆಲ ರಾಜಕಾರಣಿಗಳು, ದಲ್ಲಾಳಿಗಳು ವಿರೋಧ ವ್ಯಕ್ತಪಡಿಸಿದರು. ರೈತರ ಹೋರಾಟದ ಹಿಂದೆಯೂ ವಿದೇಶಿ ಕೈವಾಡ ಇತ್ತು. ಇದಕ್ಕೆ ವಿದೇಶದಿಂದ ಹಣ ಕೂಡ ಬರುತ್ತದೆ. ಈ ಬಗ್ಗೆ ರೈತರು ಎಚ್ಚರ ವಹಿಸಬೇಕಿದೆ.
>
> | ಡಾ. ವಿಜಯ ಸಂಕೇಶ್ವರ
> ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್

### ಗುಟ್ಕಾ ಬ್ಯಾನ್ ಮಾಡಲಿ

ದೇಶದ ಶಕ್ತಿಯಾಗಿರುವ ಯುವಜನತೆಗೆ ಮಾರಕವಾಗಿರುವ ಗುಟ್ಕಾ ಸೇವನೆಯಿಂದ ದೊಡ್ಡ ಸಂಖ್ಯೆಯ ಯುವಕರು ಸಾವಿಗೀಡಾಗುತ್ತಿದ್ದಾರೆ. ಇವರಲ್ಲಿ ರೈತರ ಮಕ್ಕಳೂ ಸೇರಿದ್ದಾರೆ. ಇದನ್ನು ಮನಗಂಡೇ ದೇಶದ 20 ರಾಜ್ಯಗಳು ಈಗಾಗಲೆ ಗುಟ್ಕಾ ಬ್ಯಾನ್ ಮಾಡಿವೆ. ಆದರೆ, ಕರ್ನಾಟಕದಲ್ಲಿ ಬ್ಯಾನ್ ಮಾಡುವ ನಿರ್ಧಾರ ಕೈಗೊಂಡಿಲ್ಲ. ಇದರಿಂದ ಯಾರಿಗೂ ನಷ್ಟವಾಗುವುದಿಲ್ಲ. ಮ್ಯಾನ್ಮಾರ್ ಸೇರಿ ವಿದೇಶಗಳಿಂದ ಬರುವ ಅಡಕೆ ಬಂದ್ ಮಾಡಿದರೆ ಸ್ಥಳೀಯ ಅಡಕೆಗೆ ಹೆಚ್ಚಿನ ಬೆಲೆ ಸಿಗುತ್ತದೆ. ಕೆಟ್ಟ ರಾಜಕಾರಣದಿಂದ ನಾವು ಪಾಪದ ಕೆಲಸ ಮಾಡಬಾರದು. ಇದನ್ನು ಗಮನಿಸಿಯಾದರೂ ಸರ್ಕಾರ ರಾಜ್ಯದಲ್ಲಿ ಗುಟ್ಕಾ ನಿಷೇಧ ಮಾಡುವ ನಿರ್ಧಾರ ಕೈಗೊಳ್ಳಲಿ ಎಂದು ಡಾ. ವಿಜಯ ಸಂಕೇಶ್ವರ ಒತ್ತಾಯಿಸಿದರು.

### ವೈಜ್ಞಾನಿಕ ಕೃಷಿ ಕಾರ್ಯಕ್ರಮಕ್ಕೆ ಸಲಹೆ

ಬೆಂಗಳೂರು ಕೃಷಿ ವಿವಿ ಕುಲಪತಿ ಡಾ. ಎಸ್.ವಿ.ಸುರೇಶ್ ಮಾತನಾಡಿ, ಸದ್ಯ ಕೃಷಿ ಕ್ಷೇತ್ರದಲ್ಲಿ ವಿವಿ ಕೈಗೆತ್ತಿಕೊಳ್ಳುವ ಕಾರ್ಯಕ್ಕೆ ಸವಾಲು ಹಾಗೂ ಜವಾಬ್ದಾರಿ ಹೆಚ್ಚಿದೆ. ರೈತರಿಗಾಗಿ ವಿಜಯವಾಣಿ ಜತೆಗೂಡಿ ರೈತರ ಕುಂದು-ಕೊರತೆ ನಿವಾರಿಸಲು ಕೃಷಿ ಸಂಬಂಧಿತ ಪ್ರಶ್ನೆ ಮಾಲಿಕೆ ಆರಂಭಿಸಿ ಯಶಸ್ವಿ 3 ವರ್ಷ ಪೂರ್ಣಗೊಳಿಸಲಾಗಿದೆ. ಇದರಿಂದ ರೈತರಿಗೆ ಸಾಕಷ್ಟು ಅನುಕೂಲವಾಗಿದೆ. ವಿವಿಗೆ ಬರುತ್ತಿರುವ ದೂರವಾಣಿ ಕರೆಗಳ ಸಂಖ್ಯೆ 3 ಪಟ್ಟು ಹೆಚ್ಚಿದೆ. ಮುಂದಿನ ದಿನಗಳಲ್ಲಿ 'ವಿಜಯವಾಣಿ' ಪತ್ರಿಕೆಯು ರೈತರಿಗೆ ವೈಜ್ಞಾನಿಕ ಕೃಷಿ ಬಗ್ಗೆ ವಿನೂತನ ಕಾರ್ಯಕ್ರಮ ಹಮ್ಮಿಕೊಂಡಲ್ಲಿ ಅದಕ್ಕೆ ವಿವಿಯು ತಾಂತ್ರಿಕ ಹಾಗೂ ಇತರ ನೆರವು ನೀಡಲಾಗುವುದು ಎಂದು ಭರವಸೆ ನೀಡಿದರು.



ಬೆಂಗಳೂರು ಕೃಷಿ ವಿವಿ ಕ್ಯಾಂಪಸ್ ಜಿಕೆವಿಕೆಯಲ್ಲಿ ಸೋಮವಾರ ವಿವಿಯ ಎಟಿಐಸಿ ಮತ್ತು ಖುಷ್ಕಿ ಬೇಸಾಯ ಪ್ರಾಯೋಜನೆ ವಿಭಾಗವು ಆಯೋಜಿಸಿದ್ದ 'ವಿಜಯವಾಣಿ' ಪತ್ರಿಕೆಯ ಪ್ರಶ್ನೋತ್ತರ ಅಂಕಣ 'ರೈತ ಮಿತ್ರ' 3ನೇ ವಾರ್ಷಿಕೋತ್ಸವ ಹಾಗೂ 'ಕ್ಯಾಚ್ ದಿ ರೈನ್' ಕಾರ್ಯಾಗಾರವನ್ನು ವಿಆರ್‌ಎಲ್ ಸಮೂಹ ಸಂಸ್ಥೆಗಳ ಚೇರ್ಮನ್ ಡಾ. ವಿಜಯ ಸಂಕೇಶ್ವರ ಉದ್ಘಾಟಿಸಿದರು. ವಿವಿ ಕುಲಪತಿ ಡಾ. ಎಸ್.ವಿ. ಸುರೇಶ್ ಇತರರಿದ್ದರು.

### ಶ್ರದ್ಧೆಯ ದುಡಿಮೆಗೆ ಫಲ ಉಂಟು

ಪ್ರಸ್ತುತ ರೈತರು ಸಂಕಷ್ಟ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದಾರೆ. ಕೆಲವರು ಬೆಳೆ ನಷ್ಟಕ್ಕೊಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದರೆ, ರೈತರಿಗಿಂತ ಹೆಚ್ಚು ಸಮಸ್ಯೆಯನ್ನು ಸಾರಿಗೆ ಕ್ಷೇತ್ರದವರು ಎದುರಿಸುತ್ತಿದ್ದು 1,000ಕ್ಕೆ ಒಬ್ಬರು ಮಾತ್ರ ಲಾಭ ಕಾಣುತ್ತಿದ್ದರೂ, ಯಾರೂ ಆತ್ಮಹತ್ಯೆ ಮಾಡಿಕೊಳ್ಳುತ್ತಿಲ್ಲ. ಕೆಲ ಕೃಷಿಕರ ಮಕ್ಕಳು ವ್ಯವಸಾಯದಿಂದ ವಿಮುಖರಾಗುತ್ತಿದ್ದರೆ, ಸಾಫ್ಟ್‌ವೇರ್ ಕ್ಷೇತ್ರದಲ್ಲಿರುವವರು ಉದ್ಯೋಗಕ್ಕೆ ರಾಜೀನಾಮೆ ನೀಡಿ ಖುಷಿಯಿಂದ ಕೃಷಿಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಹಾಗಾಗಿ ರೈತರು ಶ್ರದ್ಧೆ ಹಾಗೂ ಸೇವಾ ತತ್ಪರತೆ ಅನುಸರಿಸಿದರೆ ಭೂಮಿ ತಾಯಿ ಕೈಬಿಡುವುದಿಲ್ಲ. ರೈತರು ಹೊಸ ವಿಧಾನಗಳನ್ನು ಅಳವಡಿಸಿಕೊಂಡು ರಫ್ತು ಮಾಡುವಂತಹ ಎತ್ತರಕ್ಕೆ ಬೆಳೆಯಬೇಕು. ಭಾರತೀಯ ಪದ್ಧತಿಯಾದ ಸಾವಯವ ಕೃಷಿ ಅವಲಂಬಿಸುವುದು ಉತ್ತಮ ಎಂದು ಡಾ.ವಿಜಯ ಸಂಕೇಶ್ವರ ವಿವರಿಸಿದರು.

**ತಜ್ಞರಿಂದ ಜಾಗೃತಿ ಕಾರ್ಯ:** ಸಭಾ ಕಾರ್ಯಕ್ರಮದ ಬಳಿಕ ರೈತರಿಗೆ ಖುಷ್ಕಿ ಬೇಸಾಯದಲ್ಲಿ ಮಳೆನೀರು ಕೊಯ್ಲು ಪ್ರಾಮುಖ್ಯತೆ ಕುರಿತು ಪ್ರಾಯೋಜನೆಯ ವಿಜ್ಞಾನಿ ಡಾ.ಮೂಡಲಗಿರಿಯಪ್ಪ ಮಾಹಿತಿ ಒದಗಿಸಿದರು. ಹೊರ ಹರಿಯುವ ಮಳೆನೀರು ಕೊಯ್ಲು ತಾಂತ್ರಿಕತೆ ಬಗ್ಗೆ ಹಿರಿಯ ವಿಜ್ಞಾನಿ ಡಾ. ಕೆ.ದೇವರಾಜ ಹಾಗೂ ಅಂತರ್ಜಲ ಮತ್ತು ಮಳೆಕೊಯ್ಲು ಬಗ್ಗೆ ತಜ್ಞ ಡಾ. ಎನ್.ಜೆ.ದೇವರಾಜ ರೆಡ್ಡಿ ಕೃಷಿಕರಿಗೆ ಅರಿವು ಮೂಡಿಸಿದರು. ಇದೇ ವೇಳೆ ಕೆಂಗೇರಿಯ ಸುಸ್ಥಿರ ಪ್ರತಿಷ್ಠಾನ ತಂಡದ ಸದಸ್ಯರು ಮಳೆಕೊಯ್ಲು ಕುರಿತು ಕಿರುನಾಟಕ ಅಭಿನಯಿಸಿದರು. ಕೃಷಿ ವಿವಿ ಕುಲಸಚಿವ ಡಾ. ಕೆ.ಸಿ.ನಾರಾಯಣಸ್ವಾಮಿ, ಎಟಿಐಸಿ ಮುಖ್ಯಸ್ಥ ಡಾ. ಕೆ.ಪಿ.ರಘುಪ್ರಸಾದ್ ಉಪಸ್ಥಿತರಿದ್ದರು.

10-09-2024
Vijayavani Pg 05

# ರೈತರಿಗೆ ಶೀಘ್ರ ಆಧಾರ್ ಮಾದರಿ ಕಾರ್ಡ್

■ ಮುಂದಿನ ತಿಂಗಳು ಚಾಲನೆ

■ ಕೃಷಿ ಯೋಜನೆಗಳ ಅನುಷ್ಠಾನಕ್ಕೆ ಅನುಕೂಲ

**ಹೊಸದಿಲ್ಲಿ:** ರೈತರಿಗೆ ಆಧಾರ್ ಮಾದರಿಯ ವಿಶಿಷ್ಟ ಗುರುತಿನ ಕಾರ್ಡ್ ನೀಡುವ ಯೋಜನೆಗೆ ಶೀಘ್ರದಲ್ಲೇ ಚಾಲನೆ ನೀಡಲಾಗುವುದು ಎಂದು ಕೇಂದ್ರ ಸರಕಾರ ಘೋಷಿಸಿದೆ.

ಸುದ್ದಿ ಸಂಸ್ಥೆ ಜತೆ ಮಾತನಾಡಿದ ಕೇಂದ್ರ ಕೃಷಿ ಕಾರ್ಯದರ್ಶಿ ದೇವೇಶ್ ಚತುರ್ವೇದಿ ಅವರು, "ಅಕ್ಟೋಬರ್ ಮೊದಲ ವಾರದಲ್ಲಿ ರೈತರ ನೋಂದಣಿ ಪ್ರಕ್ರಿಯೆ ಆರಂಭಿಸಲಾಗುವುದು. ನೋಂದಣಿ ಹೇಗೆ ನಡೆಯಬೇಕು ಎಂಬ ಕುರಿತು ಮಾರ್ಗದರ್ಶಿ ಸೂತ್ರಗಳನ್ನು ಸಿದ್ಧಪಡಿಸಲಾಗುತ್ತಿದೆ. ಮುಂದಿನ ವರ್ಷ ಮಾರ್ಚ್ ಅಂತ್ಯದ ವೇಳೆಗೆ ಐದು ಕೋಟಿ ರೈತರನ್ನು ನೋಂದಾಯಿಸಬೇಕು ಎನ್ನುವ ಗುರಿ ಹೊಂದಲಾಗಿದೆ," ಎಂದು ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ 2,817 ಕೋಟಿ ರೂ. ವೆಚ್ಚದೊಂದಿಗೆ 'ಡಿಜಿಟಲ್ ಅಗ್ರಿಕಲ್ಚರ್ ಮಿಷನ್'ಗೆ ಅನುಮೋದನೆ ನೀಡಿದೆ. ಅದರ ಭಾಗವಾಗಿ ರೈತರ ಮಾಹಿತಿಯ ಡಿಜಿಟಲೀಕರಣಕ್ಕಾಗಿ ಗುರುತಿನ ಚೀಟಿ ನೀಡುವ ಯೋಜನೆ ರೂಪಿಸಲಾಗಿದೆ.




ಮಹಾರಾಷ್ಟ್ರ ಮತ್ತು ಉತ್ತರಪ್ರದೇಶದಲ್ಲಿ ವಿಶಿಷ್ಟ ಕಾರ್ಡ್‌ಗೆ ನೋಂದಣಿ ಯೋಜನೆಯನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗಿತ್ತು. ಈಗ ಅದನ್ನು 19 ರಾಜ್ಯಗಳಿಗೆ ವಿಸ್ತರಿಸಲಾಗುತ್ತದೆ.

**ಅನುಕೂಲಗಳೇನು?:** ರೈತರ ನೋಂದಣಿಯಾದ ಕೂಡಲೇ ಆಧಾರ್ ಮಾದರಿಯ ವಿಶಿಷ್ಟ ಗುರುತಿನ ಕಾರ್ಡ್ ನೀಡಲಾಗುತ್ತದೆ. ಕನಿಷ್ಠ ಬೆಂಬಲ ಬೆಲೆ, ಕಿಸಾನ್ ಕ್ರೆಡಿಟ್ ಕಾರ್ಡ್ ಸೇರಿದಂತೆ ಹಲವು ಕೃಷಿ ಸಂಬಂಧಿತ ಯೋಜನೆಗಳ ನೆರವು ಪಡೆಯಲು ವಿಶಿಷ್ಟ ಕಾರ್ಡ್ ಒತ್ತಾಸೆ ನೀಡುತ್ತದೆ. ಸರಕಾರದ ಯೋಜನೆ ಮತ್ತು ಕೆಲವೊಂದು ಕಾರ್ಯಕ್ರಮಗಳನ್ನು ವಿಸ್ತರಿಸಲು ಅಗತ್ಯವಿರುವ ಅಂಕಿ-ಅಂಶಗಳು, ಮಾಹಿತಿಯನ್ನೂ ಸರಕಾರಕ್ಕೆ ನೀಡಲಿದೆ.

ಈ ಗುರುತಿನ ಕಾರ್ಡ್‌ನಲ್ಲಿ ಭೂ ದಾಖಲೆಗಳು, ಜಾನುವಾರುಗಳ ಮಾಲೀಕತ್ವ, ಬಿತ್ತಿದ ಬೆಳೆಗಳು ಮತ್ತು ಪಡೆದ ಪ್ರಯೋಜನಗಳು ಸೇರಿದಂತೆ ವಿವಿಧ ರೈತ-ಸಂಬಂಧಿತ ಡೇಟಾವನ್ನು ಲಿಂಕ್ ಮಾಡಲಾಗುತ್ತದೆ.

"ಈಗ ಕೃಷಿಕರು ಯಾವುದೇ ಯೋಜನೆಯ ಲಾಭ ಪಡೆಯಲು ಸಲ್ಲಿಸುವ ಅರ್ಜಿಯು ವಿವಿಧ ಹಂತಗಳಲ್ಲಿ ಪರಿಶೀಲನೆಗೆ ಒಳಪಡಬೇಕಾಗುತ್ತದೆ. ಇದರಿಂದ ಮಂಜೂರಾತಿ ವಿಳಂಬವಾಗುತ್ತದೆ. ಇಂತಹ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿಯೇ 'ರೈತರ ರಿಜಿಸ್ಟ್ರಿ' ರೂಪಿಸಲಾಗುತ್ತದೆ. ಈಗ ಸರಕಾರದ ಬಳಿ ಇರುವ ದತ್ತಾಂಶಗಳು ರಾಜ್ಯಗಳು ಒದಗಿಸುವ ಬೆಳೆ ವಿವರ, ಕೃಷಿ ಜಮೀನು ಮಾಹಿತಿ ಮಾತ್ರ ಇದೆ. ಆದರೆ ವೈಯಕ್ತಿಕವಾಗಿ ರೈತರ ವಿವರಗಳಿಲ್ಲ. ಈ ಅಂತರವನ್ನು ನಿವಾರಿಸುವ ಗುರಿಯನ್ನು 'ರಿಜಿಸ್ಟ್ರಿ' ಹೊಂದಿದೆ," ಎಂದು ಚತುರ್ವೇದಿ ತಿಳಿಸಿದ್ದಾರೆ.

**5,00,00,000** ರೈತರನ್ನು ಮುಂದಿನ ಮಾರ್ಚ್ ಅಂತ್ಯದೊಳಗೆ ನೋಂದಾಯಿಸುವ ಗುರಿಯನ್ನು ಕೇಂದ್ರ ಸರಕಾರ ಹೊಂದಿದೆ.

**₹2,817 ಕೋಟಿ** ಡಿಜಿಟಲ್ ಅಗ್ರಿಕಲ್ಚರ್ ಮಿಷನ್‌ಗೆ ಕೇಂದ್ರ ಸರಕಾರ ಮೀಸಲಿರಿಸಿರುವ ಅನುದಾನ.

10-09-2024
V-karnataka Pg 04

For more information visit
University Library Website
Web - uasbagrilibindia.org
E-mail- librarian@uasbangalore.edu.in

# ಕೃಷಿಯಲ್ಲಿ ಗೋವು ಮತ್ತು ಗೋಉತ್ಪನ್ನಗಳ ಮಹತ್ವ

**ಧರಣಿ ಮಂಡಲ**



• ಕೆ.ಎಸ್. ಶೈಲೇಶ್ ಹೊಳ್ಳ
shyleshholla@gmail.com

ಕೃಷಿ ತಜ್ಞರಾದ ಎಫ್. ಎಚ್. ಗಿಂಗ್ ಎಂಬುವವರು ತಾವು ಬರೆದ 'ನಲವತ್ತು ಶತಮಾನಗಳ ರೈತರು' ಎಂಬ ಸಂಶೋಧನಾ ಗ್ರಂಥದಲ್ಲಿ, ಪ್ರಾಚೀನ ಭಾರತ ಮತ್ತು ಚೀನಾದ ಕೃಷಿ ಪದ್ಧತಿಯ ಕುರಿತಂತೆ ಸವಿಸ್ತಾರವಾಗಿ ವರ್ಣಿಸಿದ್ದಾರೆ. ಅವರು ತಮ್ಮ ಪುಸ್ತಕದಲ್ಲಿ ಈ ಎರಡು ದೇಶಗಳ ಮಣ್ಣಿನ ಮಹತ್ವವನ್ನು ಹೇಳುತ್ತಾ, ವಿಶೇಷವಾಗಿ ಭಾರತದಲ್ಲಿನ ಕೃಷಿ ಭೂಮಿಯ ಮಣ್ಣು ತನ್ನ ಫಲವತ್ತತೆಯನ್ನು ಇಂದಿಗೂ ಉಳಿಸಿಕೊಂಡಿರುವುದರ ಹಿನ್ನೆಲೆಯನ್ನು ಬಹಿರಂಗಪಡಿಸಿದ್ದಾರೆ. ಬೇರೆಲ್ಲಾ ದೇಶಗಳಲ್ಲಿ ಮಣ್ಣು ಸತತವಾಗಿ ಬಿಸಿಲು ಗಾಳಿ ಮಳೆಗೆ ಸವಕಲಾಗುತ್ತಿದ್ದರೂ ಈ ಎರಡು ದೇಶಗಳ ಮಣ್ಣು ಇಂದಿಗೂ ತನ್ನ ಫಲವತ್ತತೆಯನ್ನು ಉಳಿಸಿಕೊಂಡಿದೆ. ಇದಕ್ಕೆ ಪ್ರಮುಖ ಕಾರಣ ಇವರುಗಳ ಬಳಿ ಇರುವ ಗೋವು ಮತ್ತು ಅದರ ಗೊಬ್ಬರ ಹಾಗೂ ಮೂತ್ರವಾಗಿದೆ ಎಂಬುದಾಗಿ ತಿಳಿಸಿದ್ದಾರೆ. ಹಾಗೆಯೇ ಸುಮಾರು 200 ವರ್ಷಗಳ ಹಿಂದೆ ಭಾರತಕ್ಕೆ ಭೇಟಿ ನೀಡಿದ್ದ ಇಂಗ್ಲೇಂಡಿನ ಅಧಿಕಾರಿಯೊಬ್ಬ ತಮಿಳುನಾಡಿನ ಭತ್ತದ ಕೃಷಿಯನ್ನು ಕಂಡು ಹೌಹಾರಿದ್ದ. ಇಡೀ ವಿಶ್ವದಲ್ಲೇ ಅತ್ಯಂತ ಹೆಚ್ಚು ಭತ್ತದ ಇಳುವರಿಯನ್ನು ಅಲ್ಲಿಯ ರೈತರು ತೆಗೆಯುವುದನ್ನು ಕಂಡು ಅದರ ಮೂಲವನ್ನು ಅರಸುತ್ತಾ, ಕೆಲವೊಂದಿಷ್ಟು ಅಲ್ಲಿಯ ಕೃಷಿ ಸಂಬಂಧಿತ ವಿಸ್ಮಯ ಸಂಗತಿಗಳನ್ನು ತನ್ನ ಪುಸ್ತಕದಲ್ಲಿ ದಾಖಲಿಸಿಕೊಂಡಿದ್ದ. ಹಾಗೆಯೇ ಇಲ್ಲಿಯ ಹೆಚ್ಚಿನ ಇಳುವರಿಗೆ ಪ್ರಮುಖ ಕಾರಣ ಸಗಣಿ ಮತ್ತು ಗೋಮೂತ್ರ ಎಂಬುದಾಗಿ ಬರೆದುಕೊಂಡಿದ್ದ.

ಕೃಷಿಭೂಮಿ ಎಂಬುದು ಭಾರತೀಯರಿಗೆ ಒಂದು ರೀತಿಯಲ್ಲಿ ಕರ್ಮಭೂಮಿಯೂ ಹೌದು, ಮಾತೃಭೂಮಿಯೂ ಹೌದು. ಹೀಗಾಗಿ ನಮ್ಮ ಪೂರ್ವಜರ ಮಾತೃತ್ವದ ಮಮಕಾರ ಮತ್ತು ದೇಶಿ ಗೋವಿನ ಸಗಣಿ, ಗೋಮೂತ್ರ ಹಾಗೂ ಅದರ ಉತ್ಪನ್ನಗಳು ಮಣ್ಣಿನಲ್ಲಿ ಸೇರಿಕೊಂಡು ಬೆಳೆಯುತ್ತಿದ್ದ ಬೆಳೆಯನ್ನು ಬಂಗಾರವನ್ನಾಗಿಸುತ್ತಿತ್ತು. ಪ್ರತಿನಿತ್ಯ ಸೇವಿಸುವ ಆಹಾರದ ಮೂಲ ಮತ್ತು ಮಣ್ಣಿಗೆ ಮಾತೃತ್ವವನ್ನುಣಿಸುವವಳು ಗೋವು ಎಂಬುದು ಅತ್ಯಂತ ಸ್ಪಷ್ಟವಾಗಿ ಅಂದಿನ ಅನ್ನದಾತರಿಗೆ ತಿಳಿದಿತ್ತು. ಹೀಗಾಗಿಯೇ ಗೋವನ್ನು ಕೃಷಿಪ್ರಧಾನವಾಗಿಯೇ ಭಾಗಶಃ ಬಳಸುವುದು ವಾಡಿಕೆಯಾಗಿತ್ತು, ಪದ್ಧತಿಯಾಗಿತ್ತು. ಎಂದಿಗೂ ಹಾಲಿಗಾಗಿ ಮತ್ತು ಮಾಂಸಕ್ಕಾಗಿ ಗೋವೆಂಬುದು ಅವರ್‍ಯಾರಿಗೂ ಕಂಡುಬರಲೇ ಇಲ್ಲ. ಹೀಗಾಗಿಯೇ ಅಂದೆಲ್ಲಾ ಗೋವುಗಳನ್ನು ಕಟ್ಟಿ ಸಾಕಲಿಲ್ಲ, ಬದಲಿಗೆ ಬಿಟ್ಟು ಸಾಕಿದರು. ಇದರಿಂದ ಅವು ಮೇಯುತ್ತಾ ನಡೆದವು. ಹೋದಲೆಲ್ಲಾ ಭೂಮಿ ಸಮೃದ್ಧವಾಗುತ್ತಾ ಹೋಯಿತು. ಇದು ಇಂದಿಗೂ ಇಲ್ಲಿಯ ವಿಲಾಸಿ ಮತ್ತು ಆಲಸಿ ರೈತನಿಗೆ ತಿಳಿಯಲೇ ಇಲ್ಲ.

ಹಿಂದೆಲ್ಲಾ ರೈತನ ಬಳಿ ಸಾಕಷ್ಟು ದೇಶಿ ಗೋತಳಿಗಳಿದ್ದದ್ದನ್ನು ದಾಖಲೆಗಳು ದೃಢಪಡಿಸುತ್ತವೆ. ಇವುಗಳು ಗುಡ್ಡ, ಬೆಟ್ಟ, ಹುಲ್ಲುಗಾವಲು ಸುತ್ತಾಡಿ, ಮೇವು ತಿಂದು ಸಂಜೆ ಮನೆಗೆ ಮರಳುತ್ತಿದ್ದವು. ಅವುಗಳು ತಿರುಗಾಡುವ ಜಾಗಗಳಲ್ಲಿ ಹಾಕಿದ ಸಗಣಿ ಮತ್ತು ಮೂತ್ರ ಆ ಬೆಟ್ಟ ಗುಡ್ಡಗಳಲ್ಲಿದ್ದ ಹುಲ್ಲುಗಾವಲುಗಳ ಮಣ್ಣನ್ನು ಫಲವತ್ತಾಗಿಸಿ, ಪುನಃ ಹುಲ್ಲು ಗಿಡಗಳು ಬೆಳೆಯಲು ಅನುಕೂಲಕರವಾಗುತ್ತಿತ್ತು. ಅಲ್ಲದೆ ಸಗಣಿಯ ಮೂಲಕ ಬೀಜಗಳು ಎಲ್ಲೆಡೆ ಪಸರಿಸಿ ಮಳೆಗಾಲ ಬಂದಾಗ ಪುನಃ ಮೊಳೆತು ಚಿಗುರುವಂತಾಗುತ್ತಿತ್ತು. ಒಟ್ಟಾರೆ ಪರಿಸರದ ಸಮತೋಲನ ಮತ್ತು ಸಮೃದ್ಧಿಗೆ ದೇಶಿ ಗೋವುಗಳು ಅತ್ಯಂತ ಪೂರಕವಾಗಿದ್ದವು. ಇಂತಹ ಸುಸ್ಥಿರ ಕೃಷಿ ಇಂದು ಅಸ್ಥಿರಗೊಳ್ಳಲು ಇಂತಹ ಬಹುಪಯೋಗಿ ದನಗಳನ್ನು ಕೃಷಿ ಚಟುವಟಿಕೆಗಳಿಂದ ಪ್ರತ್ಯೇಕಿಸಿರುವುದು ಅತ್ಯಂತ ಪ್ರಮುಖ ಕಾರಣವೆಂದೇ ಹೇಳಲಾಗುತ್ತಿದೆ. ಇದರೊಂದಿಗೆ ಗೋವುಗಳಿಂದ ಶೂನ್ಯ ಬಂಡವಾಳವಾಗಿದ್ದ ಕೃಷಿ ಇಂದು ಅವುಗಳಿಲ್ಲದೆ ಅತ್ಯಂತ ದುಬಾರಿಯಾಗಿದೆ. ಇದರ ಪರಿಣಾಮ ರೈತ ಕೃಷಿಯಿಂದ ದೂರ ಉಳಿಯುತ್ತಿದ್ದು, ಕೃಷಿ ಭೂಮಿಯಲ್ಲಿ ಯಾವುದೇ ಚಟುವಟಿಕೆ ನಡೆಯದಂತಾಗಿದೆ.

ಭೂಮಿಯ ತೇವಾಂಶದ ರಕ್ಷಣೆಯಲ್ಲಿ ಅತಿ ಮುಖ್ಯ ಪಾತ್ರ ವಹಿಸುವುದು ಸಣ್ಣ ಸಣ್ಣ ಕಳೆಯಂಥವುಗಳು. ಇವು ನೂರಾರು ವರ್ಷಗಳವರೆಗೆ ಭೂಮಿಯಾಳದಲ್ಲಿ ಬೇರುಗಳನ್ನು ಉಳಿಸಿಕೊಂಡು ಬಂದಿರುತ್ತವೆ. ಇಂತಹ ಸಸ್ಯರಾಶಿಯ ಬೇರುಗಳು ಮೇಲಕ್ಕೆ ಬಂದು ಬೇಸಿಗೆಯಲ್ಲಿ ಜೀವ ಕಳೆದು ಕೊಳ್ಳುತ್ತವೆ. ಒಂದೊಮ್ಮೆ ಅಂತಹ ಭೂಮಿಯಲ್ಲಿ ಕೃಷಿ ನಿಲ್ಲಿಸಿದರೆ ಮತ್ಯಾವುದೇ ಹಸಿರು ಅಲ್ಲಿ ಚಿಗುರದೆ ಭೂಮಿ ಬರಡಾಗಿ ಪರಿವರ್ತನೆಯಾಗುತ್ತದೆ. ಇದರಿಂದ ಬೀಳುವ ಮಳೆ ನೀರು ಸಹ ಭೂಮಿಯ ಒಳಗೆ ಇಳಿಯಲು ಆಸ್ಪದವಿಲ್ಲದಂತಾಗಿ ಆ ಭಾಗದ ಅಂತರ್ಜಲ ಕುಸಿಯುತ್ತ ಸಾಗುತ್ತದೆ. ಹೀಗೆ ಭೂಮಿಯ ಮೇಲ್ಮೈ ಸಡಿಲಗೊಂಡು ಮಳೆಗಾಲದಲ್ಲಿ ಅತ್ಯಂತ ಸುಲಭವಾಗಿ ಮಣ್ಣು ಕೊಚ್ಚಿ ಹೋಗುತ್ತದೆ. ಇದರ ಜೊತೆಗೆ ಭೂಮಿಗೆ ಹಾಕಿದ ಸಾರವು ಕೊಚ್ಚಿ ಹೋಗುವುದಲ್ಲದೇ, ಇವು ನೀರು ಹೋಗಿ ಸೇರುವ ಕೆರೆ ಇತ್ಯಾದಿ ಜಲಮೂಲಗಳಲ್ಲಿ ಸೇರಿ ವರ್ಷದಿಂದ ವರ್ಷಕ್ಕೆ ಹೂಳು ತುಂಬಿ, ಕಾಲಕ್ರಮೇಣ ಅವು ಸಹ ಬತ್ತಿ ಹೋಗುತ್ತವೆ. ಹೀಗೆ ಪರಿಸರ ಕೊಂಡಿಯ ನಾಶಕ್ಕೆ ಕಾರಣ ರೈತ ತನ್ನ ಮನೆಯಲ್ಲಿದ್ದ ಗೋವಂಶವನ್ನು ಮಾರಿ ವಿಲಾಸಿ ಜೀವನಕ್ಕೆ ಮತ್ತು ಯಾಂತ್ರಿಕ ಕೃಷಿಗೆ ಒತ್ತುಕೊಟ್ಟಿದ್ದೇ ಆಗಿದೆ. ಆಧುನಿಕ ಅಥವಾ ವೈಜ್ಞಾನಿಕ ಕೃಷಿಯಿಂದ ರೈತ ಸೋಮಾರಿಯಾಗುವುದರೊಂದಿಗೆ ಕೃಷಿ ಚಟುವಟಿಕೆಗಿಂತ ಇನ್ನಿತರೆ ಚಟುವಟಿಕೆಗಳಲ್ಲಿ ಆಸಕ್ತಿ ತೋರಿಸುವಂತಾಗಿದೆ. ಇದರ ಪರಿಣಾಮ ರೈತನ ಮಗ ರೈತನಾಗುವುದಕ್ಕೆ ಸ್ವತಃ ರೈತನೇ ಬಯಸದಂತಾಗಿದೆ.

ಕೃಷಿಯಲ್ಲಿ ಭಾರತೀಯ ಗೋತಳಿಗಳ ಉಪಯೋಗಗಳು ಹೇಳತೀರದು. ಕೃಷಿ ಕೆಲಸಗಳಿಗೆ ಮತ್ತು ಸಾಗಾಟಕ್ಕೆ ಎತ್ತುಗಳು ಬಳಕೆಯಾದರೆ, ಆಕಳುಗಳು ನೀಡುವ ಹಾಲು ಹಾಗೂ ಅದರ ಇನ್ನಿತರ ಉತ್ಪನ್ನಗಳು ಎಲ್ಲರ ಮತ್ತು ಎಲ್ಲಾ ರೀತಿಯ ಬಳಕೆಗೂ ಅವಶ್ಯಕವಾದುದಾಗಿವೆ. ಇವುಗಳು ನೀಡುವ ಸಗಣಿ ಗ್ರಾಮೀಣ ಉರುವಲಾಗಿ, ವಾಹನಗಳ ಇಂಧನವಾಗಿ, ವಿದ್ಯುತ್ ಉತ್ಪಾದನೆಗೆ ಜೈವಿಕ ಅನಿಲವಾಗಿ ಮತ್ತು ಕೃಷಿಯಲ್ಲಿ ಸರ್ವಶ್ರೇಷ್ಠ ಗೊಬ್ಬರವಾಗಿ ಬಳಕೆಯಾಗುತ್ತದೆ. ಇನ್ನು ಇವುಗಳ ಮೂತ್ರವಂತೂ ಹೆಚ್ಚಾಗಿ ಕೀಟನಿಯಂತ್ರಕವಾಗಿ ಬಳಕೆಯಾದರೆ ಇವುಗಳ ಇನ್ನುಳಿದ ಉತ್ಪನ್ನಗಳಿಂದ ತಯಾರಿಸುವ ಪಂಚಗವ್ಯವಂತೂ ಭೂಲೋಕದ ಸಂಜೀವಿನಿಯಾಗಿ ಕಂಡುಬಂದಿದೆ. ಹೀಗಾಗಿ ಇತ್ತೀಚಿನ ದಿನಗಳಲ್ಲಿ ಹಾಲಿಗಾಗಿ ಗೋಸಾಕಾಣಿಕೆ ಎಂಬುದು ಕೇವಲ ಪರಿಕಲ್ಪನೆಯಷ್ಟೇ. ಭಾರತೀಯ ಪಶುಪಾಲನಾ ಪದ್ಧತಿಯಲ್ಲಿ ಮೊದಲ ಆದ್ಯತೆ ಜಾನುವಾರುಗಳ ಕಾರ್ಯಕ್ಷಮತೆಗೆ ಮತ್ತು ಅದರ ಉತ್ಪನ್ನಗಳಿಗೆ. ಹಾಲಿನ ಉತ್ಪಾದನೆಗೆ ಎರಡನೇ ಆದ್ಯತೆ. ಆದರೆ ಇತ್ತೀಚಿನ ಐದಾರು ದಶಕಗಳಿಂದ ಹಾಲಿನ ಉತ್ಪಾದನೆಗೆ ಅಗ್ರ ಪ್ರಾಶಸ್ತ್ಯ ನೀಡಲಾಗುತ್ತಿದೆ. ಜೊತೆಗೆ ಅತಿ ಹೆಚ್ಚು ಹಾಲೆಂಬ ಬಿಳಿ ದ್ರಾವಣವನ್ನು ಉತ್ಪಾದಿಸುವ ವಿದೇಶಿ ತಳಿಗಳನ್ನೇ ಹೈನುಗಾರರು ಆಶ್ರಯಿಸುತ್ತಿದ್ದಾರೆ. ಅಲ್ಲದೆ ಕೃಷಿ ಚಟುವಟಿಕೆಗಳಿಗೆ ಯಂತ್ರಗಳನ್ನೇ ಹೆಚ್ಚು ಹೆಚ್ಚು ಬಳಸುತ್ತಿರುವುದರಿಂದ ಹಲವಾರು ಭಾರತೀಯ ಗೋತಳಿಗಳು ಮಹತ್ವ ಕಳೆದುಕೊಂಡು ಅಳಿದುಹೋಗುತ್ತಿವೆ. ಹೀಗಾಗಿ ಕೃಷಿಯಲ್ಲಿ ಯಾಂತ್ರೀಕರಣದಿಂದಾಗುವ ದುಷ್ಪರಿಣಾಮ ಮತ್ತು ಗೋಆಧಾರಿತ ಕೃಷಿಯ ಸತ್ಪರಿಣಾಮದ ಸೂಚ್ಯವಾಗಿಯೇ 'ಹಸು ಹೊಗೆ ಉಗುಳುವುದಿಲ್ಲ, ಟ್ರ್ಯಾಕ್ಟರ್ ಸಗಣಿ ಹಾಕುವುದಿಲ್ಲ ಎಂಬ ಉದ್ಘೋಷ ನಮ್ಮ ಹಿರಿಯ ಕೃಷಿ ಸಾಧಕರಿಂದ ಹುಟ್ಟಿತೇನೋ ಅನ್ನಿಸುತ್ತದೆ.

ವಿದೇಶದಲ್ಲಿ ಶೇಕಡಾ 5 ರಷ್ಟು ಜನರು ಮಾತ್ರ ಕೃಷಿಕರಾಗಿದ್ದರೆ, ಭಾರತದಲ್ಲಿ ಶೇಕಡಾ 70 ರಷ್ಟು ಕೃಷಿಕರಿದ್ದಾರೆ. ಅದಾಗ್ಯೂ ನಮ್ಮ ದೇಶದ ಆಹಾರೋತ್ಪಾದನೆ ನಮ್ಮೆಲ್ಲರ ಹಸಿವನ್ನು ನೀಗಿಸಲು ಸಾಧ್ಯವಾಗುತ್ತಿಲ್ಲ. ಇದಕ್ಕೆ ಪ್ರಮುಖ ಕಾರಣ ದೇಶಿ ಗೋತಳಿಗಳ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗಿರುವುದಾಗಿದೆ. 1997ರಲ್ಲಿ 17.87 ಕೋಟಿ ಇದ್ದ ದೇಶಿ ಗೋತಳಿಗಳ ಸಂಖ್ಯೆ 2007 ರಲ್ಲಿ 16.6 ಕೋಟಿಗೆ ಇಳಿದಿರುವುದನ್ನು ಸರ್ಕಾರದ ಅಂಕಿ ಅಂಶಗಳೇ ಬಹಿರಂಗಪಡಿಸಿವೆ. ಈ ಹಿನ್ನೆಲೆಯಲ್ಲಿ ನಮ್ಮ ದೇಶದ ಗೋತಳಿಗಳ ಬಗ್ಗೆ ಅರಿತು ಅವುಗಳನ್ನು ಉಳಿಸಿಕೊಳ್ಳುವುದು ಅತ್ಯಗತ್ಯವಾಗಿದೆ. ಮುಖ್ಯವಾಗಿ ಸಾಕಷ್ಟು ವೈಶಿಷ್ಟ್ಯಗಳಿಂದ ಕೂಡಿರುವ ಇವುಗಳನ್ನು ಸಂರಕ್ಷಿಸಿ, ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕಿದೆ.

ತಡವಾದರೂ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳು ಭಾರತೀಯ ಗೋತಳಿಗಳ ಸಂರಕ್ಷಣೆಗೆ ಮುತುವರ್ಜಿ ವಹಿಸಿದ ಕಾರಣ 39 ದೇಶಿ ಗೋತಳಿಗಳಲ್ಲಿ ಶೇಕಡಾ 14ರಷ್ಟು ತಳಿಗಳು ಕೃತಕ ಗರ್ಭಧಾರಣೆ ಯೋಜನೆಯಿಂದ ಹೊರಗುಳಿಯುವಂತಾಗಿದೆ ಎಂಬುದಾಗಿ ಹೇಳಲಾಗುತ್ತಿದೆ. ಇದರೊಂದಿಗೆ ದೇಶಿ ಗೋಸಂತತಿ ಹೆಚ್ಚಿಸಲು ದೊಡ್ಡ ಮಟ್ಟದ ಯೋಜನೆಯನ್ನು ಸರ್ಕಾರದಿಂದ ಕೈಗೊಳ್ಳಲಾಗುತ್ತಿದೆಯಂತೆ. ಇದಕ್ಕಾಗಿ ಉತ್ಕೃಷ್ಟವಾದ 500 ಹೋರಿಗಳನ್ನು ಗುರುತಿಸಿದ್ದು, ಇವುಗಳನ್ನು ಬಳಸಿಕೊಂಡು ಸುಮಾರು ಏಳು ಸಾವಿರದಷ್ಟು ಶ್ರೇಷ್ಠ ದರ್ಜೆಯ ಹಸುಗಳನ್ನು ಪಡೆಯುವ ಮಹತ್ವಕಾಂಕ್ಷಿ ಯೋಜನೆ ಸಿದ್ಧವಾಗಿದೆಯಂತೆ. ಇಂತಹ ಹಸುಗಳಿಂದ ವಾರ್ಷಿಕವಾಗಿ 50 ಲಕ್ಷ ದೇಶಿ ಗೋಸಂತತಿಯನ್ನು ಸೃಷ್ಟಿಸಲಾಗುತ್ತದೆ ಎಂಬುದಾಗಿ ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ ಈ ಹಿಂದೆಯೇ ತಿಳಿಸಿತ್ತು. ಆದರೆ ಈ ಎಲ್ಲಾ ಯೋಜನೆಗಳು ಕೇವಲ ಕಡತಗಳಲ್ಲಿಯೇ ಉಳಿಯದೆ ಅನುಷ್ಠಾನಕ್ಕೆ ಬರಬೇಕಿದೆ. ಬದಲಾಗುವ ಸರ್ಕಾರಗಳೊಂದಿಗೆ ಕಾರ್ಯ ಯೋಜನೆ ಬದಲಾಗಬಾರದಾಗಿದೆ.

10-09-2024
Hosadiganta Pg 06

# ಆಹಾರ ಮಾರುಕಟ್ಟೆಯಲ್ಲಿ ಮಖಾನಾಗೆ ಹೆಚ್ಚಿದ ಬೇಡಿಕೆ



ಲವಲvk ಸುದ್ದಿಲೋಕ
feedbacklvk@vijaykarnataka.com

**ಫುಡ್ ಮಾರ್ಕೆಟ್**




ಕಮಲದ ಹೂವು ನೋಡಲು ಸುಂದರ. ಪೂಜನೀಯ ಸ್ಥಾನವನ್ನೂ ಹೊಂದಿದೆ. ಈಗ ಅದರ ಬೀಜಕ್ಕೆ ಬೇಡಿಕೆ ಬಂದಿದ್ದು, ಆಹಾರ ಮಾರುಕಟ್ಟೆಯಲ್ಲಿ ಮಖಾನಾ ಹೆಸರಿನಲ್ಲಿ ಇದು ಸ್ಥಳೀಯವಾಗಿ ಭರ್ಜರಿ ಬೇಡಿಕೆ ಹೆಚ್ಚಿಸಿಕೊಂಡಿದೆ ಎನ್ನುತ್ತಾರೆ ಆಹಾರ ಮಾರುಕಟ್ಟೆ ತಜ್ಞರು.

ಮಖಾನಾ ಹೆಸರಿನಲ್ಲಿ ಆನ್‌ಲೈನ್ ಮಾರುಕಟ್ಟೆ, ಮಾಲ್, ಸೂಪರ್ ಮಾರ್ಕೆಟ್‌ಗಳಿಂದ ಹಿಡಿದು ಸಾಮಾನ್ಯ ಮಳಿಗೆಗಳಲ್ಲೂ ಅದರಲ್ಲೂ ಆರೋಗ್ಯಪೂರ್ಣ ಆಹಾರ ಪದಾರ್ಥಗಳ ಸಾಲಲ್ಲಿ ಕಮಲದ ಬೀಜಗಳು ಬಹುಬೇಡಿಕೆ ಸೃಷ್ಟಿಸಿಕೊಂಡಿವೆ. ಭಾರತ, ಚೀನಾ, ಜಪಾನ್, ದಕ್ಷಿಣ ಕೊರಿಯಾ, ಸಿಂಗಾಪುರ್ ಮತ್ತು ಥಾಯ್ಲೆಂಡ್ ಸೇರಿದಂತೆ ಹಲವು ರಾಷ್ಟ್ರಗಳಲ್ಲಿ ಮಕ್ಕಳು ಮತ್ತು ವಯಸ್ಕರಲ್ಲಿ ಇದನ್ನು ಸೇವಿಸಲು ಬಯಸುತ್ತಾರೆ. ಇದಕ್ಕೆ ಬೇಡಿಕೆ ಹೆಚ್ಚಲು ಜನರ ಬದಲಾಗುತ್ತಿರುವ ಜೀವನಶೈಲಿ ಮತ್ತು ಹೆಚ್ಚಿದ ಆರೋಗ್ಯಪ್ರಜ್ಞೆ ಕಾರಣ ಎನ್ನಲಾಗುತ್ತಿದೆ. ಅಲ್ಲದೆ ವೀಗನ್ ಆಹಾರಶೈಲಿ ಅಂತಾರಾಷ್ಟ್ರೀಯವಾಗಿ ಹೆಚ್ಚುತ್ತಿದ್ದು, ಇದು ಕೂಡ ಮಾರುಕಟ್ಟೆಯ ಮೇಲೆ ಪ್ರಭಾವ ಬೀರಿದೆ ಎಂಬುದು ತಜ್ಞರ ಅಭಿಪ್ರಾಯ.

**ಪೋಷಕಾಂಶಗಳ ಆಗರ**

ಕರಿದ ಚಿಪ್ಸ್‌ನಂತಹ ಅನಾರೋಗ್ಯಕರ ತಿಂಡಿಗಳಿಗೆ ಪರ್ಯಾಯವಾಗಿ ಜನರು ಕಮಲದ ಬೀಜಗಳನ್ನು ತಿನ್ನುತ್ತಾರೆ. ಒತ್ತಡ ನಿರ್ವಹಣೆಯಲ್ಲಿ ಇದು ಪ್ರಮುಖ ಪಾತ್ರವಹಿಸುತ್ತದೆ. ಅಲ್ಲದೆ ಮಾನವನ ದೇಹದಿಂದ ವಿಷವನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಇದರಲ್ಲಿ ಹೆಚ್ಚಿನ ಫೈಬರ್, ಕಬ್ಬಿಣ, ಕಾರ್ಬೋಹೈಡ್ರೇಟ್, ರಂಜಕ, ಮೆಗ್ನೀಸಿಯಂ, ಪ್ರೊಟೀನ್, ಸತು ಮತ್ತು ಪೊಟಾಸಿಯಂ ಅಂಶದಿಂದಾಗಿ ನೈಸರ್ಗಿಕ, ತಾಜಾ ಮತ್ತು ಪೌಷ್ಟಿಕಾಂಶದ ತಿಂಡಿಗಳ ಬದಲಿ ಆಯ್ಕೆಯೂ ಹೌದು. ಪೋಷಕಾಂಶ ಸಮೃದ್ಧ ಆಹಾರ ಪದಾರ್ಥ ಇದು. ಹಗುರವಾದ ಮತ್ತು ಕುರುಕುಲಾದ ಈ ಬೀಜ ನೂರಾರು ವರ್ಷಗಳಿಂದ ಸಾಂಪ್ರದಾಯಿಕ ಏಷ್ಯನ್ ಮತ್ತು ಭಾರತೀಯ ಪಾಕಪದ್ಧತಿಯ ಭಾಗವಾಗಿದ್ದರೂ ಈಗ ಆರೋಗ್ಯಕರ ಆಹಾರ ಸೇವನೆಯಲ್ಲಿ ಖ್ಯಾತಿ ಪಡೆದಿದೆ. ಉತ್ಕರ್ಷಣ ನಿರೋಧಕ ಗುಣಲಕ್ಷಣ ಹೊಂದಿರುವ ಇದು ಕಡಿಮೆ ಕ್ಯಾಲೊರಿ ಅಂಶವನ್ನು ಒಳಗೊಂಡಿದ್ದು, ಕೆಲವೆಡೆ ಉಪವಾಸದ ಆಹಾರವಾಗಿ ಸೇವಿಸಲಾಗುತ್ತದೆ. ಸುಸಜ್ಜಿತ ಮತ್ತು ಸಮತೋಲಿತ ಆಹಾರಕ್ಕಾಗಿ ಮಖಾನಾ ಪ್ರಮುಖ ಆಯ್ಕೆ. ■



**ಕಮಲದ ಬೀಜ ಆರೋಗ್ಯವರ್ಧಕ**

- ತೂಕವನ್ನು ನಿರ್ವಹಿಸಲು ಸಹಾಯ ಮಾಡುತ್ತದೆ.
- ರಕ್ತದೊತ್ತಡವನ್ನು ನಿಯಂತ್ರಿಸುತ್ತದೆ.
- ಹೃದಯದ ಆರೋಗ್ಯಕ್ಕೆ ಪೂರಕ.
- ರಕ್ತದ ಸಕ್ಕರೆಯನ್ನು ನಿರ್ವಹಿಸುತ್ತದೆ.
- ವಯಸ್ಸಾಗುವಿಕೆಯ ಪ್ರಕ್ರಿಯೆ ನಿಧಾನಗೊಳ್ಳುತ್ತದೆ.
- ಉರಿಯೂತವನ್ನು ತಡೆಯುತ್ತದೆ.
- ಸಂಧಿವಾತ ಸಮಸ್ಯೆ ನಿರ್ವಹಿಸುತ್ತದೆ.
- ಕಿಡ್ನಿ ಆರೋಗ್ಯವನ್ನು ಸುಧಾರಿಸುತ್ತದೆ.
- ಫಲವತ್ತತೆಗೆ ಸಹಾಯ ಮಾಡುತ್ತದೆ.
- ನಿದ್ರಾಹೀನತೆಯನ್ನು ಗುಣಪಡಿಸುತ್ತದೆ.
- ಜೀರ್ಣಸಂಬಂಧಿ ಆರೋಗ್ಯವನ್ನು ಸುಧಾರಿಸುತ್ತದೆ.

10-09-2024
V-karnataka Pg 06

10-09-2024
Hosadiganta Pg 06

# ರೈತರಿಗೆ ವಿವಿಧ ಪಶುಪಾಲನಾ ತರಬೇತಿ

**ತುಮಕೂರು:** ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರ, ರೈತರಿಗೆ ವಿವಿಧ ಪಶುಪಾಲನೆ ಕುರಿತು ಉಚಿತ ತರಬೇತಿ ನೀಡಲು ಉದ್ದೇಶಿಸಿದೆ ಎಂದು ಪಶುಪಾಲನಾ ಮತ್ತು ಪಶುವೈದ್ಯಕೀಯ ತರಬೇತಿ ಕೇಂದ್ರದ ಮುಖ್ಯ ಪಶುವೈದ್ಯಾಧಿಕಾರಿ ತಿಳಿಸಿದ್ದಾರೆ. ಆಧುನಿಕ ಹೈನುಗಾರಿಕೆ ತರಬೇತಿಯನ್ನು ಸೆ.12 ಮತ್ತು 13ರಂದು ಹಾಗೂ ಆಧುನಿಕ ಕೋಳಿ ಸಾಕಾಣಿಕೆ ತರಬೇತಿಯನ್ನು ಸೆ.17 ಮತ್ತು 18ರಂದು ಹಮ್ಮಿಕೊಳ್ಳಲಾಗಿದೆ. ಆಸಕ್ತರು ನಿಗದಿಪಡಿಸಿದ ದಿನಾಂಕದಂದು ಬೆಳಗ್ಗೆ 10 ಗಂಟೆಗೆ ತರಬೇತಿಗೆ ಹಾಜರಾಗಬಹುದಾಗಿದೆ. ತರಬೇತಿಗೆ ಹಾಜರಾಗಲಿಚ್ಛಿಸುವವರು ಇತ್ತೀಚಿನ 2 ಪಾಸ್‌ಪೋರ್ಟ್ ಅಳತೆ ಭಾವಚಿತ್ರ, ರೈತರ ಫ್ರೂಟ್ ಐಡಿ ಸಂಖ್ಯೆ, ಆಧಾರ್ ಕಾರ್ಡ್, ಜಾತಿ ಪ್ರಮಾಣ ಪತ್ರ(ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಾಗಿದ್ದಲ್ಲಿ)ವನ್ನು ಕಡ್ಡಾಯವಾಗಿ ತರಬೇಕು. ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಪಶು ವೈದ್ಯಕೀಯ ಸಂಸ್ಥೆ ದೂರವಾಣಿ ಸಂಖ್ಯೆ 0816-2251214ನ್ನು ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

10-09-2024
Eco Times Pg 01

# As HUL Reviews Ice-Cream Biz, Cos Line up for a Scoop

## RJ Corp, MMG Group and Nestle India among cos keen on business

**Ratna Bhushan & Sagar Malviya**

**New Delhi | Mumbai:** Hindustan Unilever's decision to set up a committee of independent directors to assess the prospects of its ice-cream business has triggered high interest from several companies, which expect the consumer goods market leader to eventually sell it, industry insiders said.

RJ Corp that operates quick-service chains KFC and Pizza Hut and handles bottling for PepsiCo, the MMG Group which runs McDonald's in North and East India and is also a franchise bottler for Coca-Cola, as well as the local unit of Nestle SA are among the companies open to evaluating HUL's ice-cream business, depending on the independent committee's decision, the people said.

Ice-cream brands such as Kwality Wall's, Cornetto and Magnum contribute about 3% to HUL's annual sales of more than ₹60,000 crore. On Friday, the company said it was setting up an independent committee to evaluate "the way forward" for the ice-cream business. The board approved "exploration of potential structures and alternatives for the restructuring".

"Each of these potential suitors have direct synergies in the ice-cream business. Negotiations will hinge on the valuation of the business," one of the industry executives said.




Indian Ice-cream Market ▸▸ 10

# Indian Ice-cream Market

▸▸ From Page 1

HUL and Nestle India did not respond to emails seeking comment, while executives at Ravi Jaipuria's RJ Corp and MMG Group declined to comment.

RJ Corp already sells the Cream Bell ice-cream, but it remains a small part compared with its businesses of PepsiCo's bottling and quick-service chains KFC, Pizza Hut and Costa Coffee. According to information on the RJ Corp website, Cream Bell has a presence in 25 states and is ranked among India's top five ice-cream brands with 800 distributors and 11,000 push carts.

For Nestle, the India unit of the world's largest packaged foods maker which counts Maggi instant noodles, Nescafé coffee and KitKat chocolates as its mainstay brands, ice-cream fits in directly with its dairy backend network. Nestle India managing director Suresh Narayanan said in previous interviews that the company was open to acquisitions "that align with its existing portfolio and meet valuation expectations".

**The Indian ice-cream market is expected to cross $5 billion by fiscal 2025 compared with $3.4 billion in 2023**

In India, Nestle briefly sold one of its global ice-cream brands, Movenpick, a decade back, but exited the business amid sluggish demand on account of steep pricing.

The MMG Group has back-end synergies in both cold chain and frozen desserts. It sells frozen desserts at its 200-plus McDonald's restaurants.

HUL parent Unilever is the world's biggest ice-cream maker with brands such as Ben & Jerry and Magnum. The 7.9 billion euro business accounts for 16% of its revenue. It is also a market leader in several countries. It had announced a plan to separate the ice-creams business globally in March and eventually sell it off, with global private equity players also being potential acquirers. Any potential deal in India will involve global alignment with what Unilever chooses to do with its ice-cream business.

The Indian ice-cream market is expected to cross $5 billion by fiscal 2025 compared with $3.4 billion in 2023, helped by expansion of domestic brands beyond the metros and the rising interest of global players, according to Wazir Advisors.

Any divestment or change in ownership at HUL will not impact Amul's ice-cream business which it said is three times bigger in volume, said Jayen Mehta, managing director of Gujarat Cooperative Milk Marketing Federation that owns Amul.

HUL has built the business through acquisitions — Kwality in 1994 and Adityaa in 2018. In India, HUL merged Kwality's branding with that of its global label, Wall's, that was first launched in 1922 and sold in more than 50 countries under many local names: Algida in Italy and Turkey, Langnese in Germany, Kibon in Brazil, Streets in Australia and Ola in the Netherlands.

10-09-2024
Prajavani Pg 10

# ಆಹಾರ ಪ್ಯಾಕಿಂಗ್: ಇರಲಿ ಎಚ್ಚರ

## ಆಹಾರ ಪದಾರ್ಥಗಳ ಪ್ಯಾಕಿಂಗ್‌ಗೆ ಪ್ಲಾಸ್ಟಿಕ್ ಹೊರತಾಗಿ ಇರುವ ಉತ್ತಮ ಪರ್ಯಾಯ ವಿಧಾನಗಳನ್ನು ಅನುಸರಿಸಲು ಜನ ಗಟ್ಟಿ ಮನಸ್ಸು ಮಾಡಬೇಕು

• ಮಲ್ಲಿಕಾರ್ಜುನ ಹೆಗ್ಗಳಗಿ

ಸಕ್ಕರೆ ಮತ್ತು ಉಪ್ಪನ್ನು ಉತ್ತಮ ಗುಣಮಟ್ಟದ ಸೆಣಬಿನ ಚೀಲಗಳಲ್ಲಿ ಸಂಗ್ರಹಿಸುವ ವಿಧಾನ ಈ ಮೊದಲು ರೂಢಿಯಲ್ಲಿತ್ತು. ಕೇಂದ್ರ ಸರ್ಕಾರವು ಕಾನೂನಿನ ಮೂಲಕ ಈ ವಿಧಾನವನ್ನು ಕಡ್ಡಾಯಗೊಳಿಸಿತ್ತು. ಆಹಾರಧಾನ್ಯಗಳ ಸಂಗ್ರಹಕ್ಕೂ ಗೋಣಿಚೀಲಗಳನ್ನೇ ಬಳಸಲಾಗುತ್ತಿತ್ತು. ಸಕ್ಕರೆ, ಉಪ್ಪು ಸಂಗ್ರಹಕ್ಕೆ ಬಳಸಿ ಖಾಲಿಯಾದ ಗೋಣಿಚೀಲಗಳನ್ನು ತೊಳೆದು ಒಣಗಿಸಿ ಮರುಬಳಕೆ ಮಾಡುವ ಪರಿಪಾಟವೂ ಇತ್ತು. ಸಹಜವಾಗಿ ಆಗ ಎಲ್ಲ ಆಹಾರ ಪದಾರ್ಥಗಳೂ ಮೈಕ್ರೊಪ್ಲಾಸ್ಟಿಕ್ ಕಣಗಳಿಂದ ಮುಕ್ತವಾಗಿ ಇರುತ್ತಿದ್ದವು.

ಸಕ್ಕರೆ ಮತ್ತು ಉಪ್ಪಿನಲ್ಲಿ ಆರೋಗ್ಯಕ್ಕೆ ಹಾನಿಕರವಾದ ಮೈಕ್ರೊಪ್ಲಾಸ್ಟಿಕ್ ಕಣಗಳು ಈಗ ಆತಂಕಕಾರಿಯಾದ ಮಟ್ಟದಲ್ಲಿ ಇವೆ ಎಂಬ 'ಆಳ ಅಗಲ'ದ ವರದಿ (ಪ್ರ.ವಾ., ಆ. 26) ಓದಿದಾಗ, ಸಕ್ಕರೆ ಮತ್ತು ಉಪ್ಪಿನ ಕೈಗಾರಿಕೆಗಳಲ್ಲಿ ಕೆಲಸ ಮಾಡಿದ ಅನುಭವ ಇರುವ ನನಗೆ, ಆಹಾರ ವಸ್ತುಗಳನ್ನು ಪ್ಯಾಕಿಂಗ್ ಮಾಡುವ ಉತ್ತಮ ವಿಧಾನವನ್ನು ಕೈಬಿಟ್ಟು, ಹಾನಿಕಾರಕ ಪಾಲಿಥಿನ್ ಮತ್ತು ಪ್ಲಾಸ್ಟಿಕ್ ಬಳಕೆಗೆ ಪಲ್ಲಟಗೊಂಡ ಸಂಗತಿಯನ್ನು ಹೇಳುವ ಮನಸ್ಸಾಯಿತು.

ಹಣ್ಣು, ತರಕಾರಿ, ಆಲೂಗಡ್ಡೆ, ಈರುಳ್ಳಿಯಂತಹ ತೋಟಗಾರಿಕೆ ಉತ್ಪನ್ನಗಳನ್ನು ಕೂಡ ಗೋಣಿಚೀಲದಲ್ಲಿಯೇ ಸಂಗ್ರಹಿಸಲಾಗುತ್ತಿತ್ತು. ಬೆಲ್ಲದ ಅಚ್ಚುಗಳನ್ನು ಗೋಣಿ ಬಟ್ಟೆಯಲ್ಲಿ ಪ್ಯಾಕ್ ಮಾಡಲಾಗುತ್ತಿತ್ತು. ಹತ್ತಿಯನ್ನು ಸೆಣಬಿನ ಜಾಳಿಗೆಗಳಲ್ಲಿ ಸಂಗ್ರಹಿಸಿ ಜವಳಿ ಕಾರ್ಖಾನೆಗಳಿಗೆ ಕಳಿಸಲಾಗುತ್ತಿತ್ತು. ಎಲ್ಲ ಆಹಾರ ವಸ್ತುಗಳು ಗೋಣಿಚೀಲಗಳಲ್ಲಿಯೇ ಮಾರುಕಟ್ಟೆಗೆ ಬರುತ್ತಿದ್ದವು.

ಈ ಚೀಲಗಳ ಬಳಕೆ ಕ್ರಮೇಣ ಕಡಿಮೆಯಾಗಿ ಪಾಲಿಥಿನ್ ಮತ್ತು ಪ್ಲಾಸ್ಟಿಕ್ ಬಳಕೆ ಮುನ್ನೆಲೆಗೆ ಬಂದಿತು. ಇದು ಈ ಅನಾಹುತ ಸೃಷ್ಟಿಗೆ ಮುಖ್ಯ ಕಾರಣವಾಗಿದೆ.

ಸೆಣಬಿನ ಚೀಲಗಳಿಗೆ ಹೋಲಿಸಿದರೆ ಪಾಲಿಥಿನ್ ಮತ್ತು ಪ್ಲಾಸ್ಟಿಕ್ ಬ್ಯಾಗುಗಳ ಬೆಲೆ ತೀರಾ ಕಡಿಮೆ. ಇದರಿಂದಾಗಿ ಇವುಗಳ ಬಳಕೆ ವೇಗವಾಗಿ ಹರಡಿತು. ಪಾಲಿಥಿನ್ ಮತ್ತು ಪ್ಲಾಸ್ಟಿಕ್ ಬ್ಯಾಗುಗಳು ಮರುಬಳಕೆಗೆ ಯೋಗ್ಯವಾಗಿ ಇರುವುದಿಲ್ಲ. ಕರಗದ ತ್ಯಾಜ್ಯಗಳಾಗಿ ಉಳಿದುಬಿಡುತ್ತವೆ. ಆದರೆ ಗೋಣಿಚೀಲಗಳನ್ನು 8ರಿಂದ 10 ವರ್ಷಗಳ ಕಾಲ ಬಳಸಬಹುದು. ಗೋಣಿಚೀಲಗಳ ಬೆಲೆ ಹೆಚ್ಚಾದರೂ ಸುರಕ್ಷಿತ ಮತ್ತು ದೀರ್ಘಕಾಲ ಉಪಯೋಗಕ್ಕೆ ಬರುತ್ತವೆ ಎಂಬುದನ್ನು ಮರೆಯಬಾರದು.

ಈಗ ಎಲ್ಲ ಸಕ್ಕರೆ ಕಾರ್ಖಾನೆಗಳು ಹಾಗೂ ಉಪ್ಪು ಉತ್ಪಾದಕ ಘಟಕಗಳು ಪಾಲಿಥಿನ್ ಮತ್ತು ಪ್ಲಾಸ್ಟಿಕ್ ಬ್ಯಾಗುಗಳನ್ನೇ ಬಳಸುತ್ತಿವೆ. ಕೃಷಿ ಉತ್ಪನ್ನಗಳ ಸಂಗ್ರಹಕ್ಕೆ ರೈತರು ಕೂಡ ಹೆಚ್ಚಾಗಿ ಇಂತಹ ಬ್ಯಾಗುಗಳನ್ನೇ ಉಪಯೋಗಿಸುತ್ತಿದ್ದಾರೆ. ಇದರಿಂದ ಮೈಕ್ರೊಪ್ಲಾಸ್ಟಿಕ್ ಕಣಗಳು ಎಲ್ಲ ಕಡೆಗೆ ದಾಳಿ ಇಡತೊಡಗಿವೆ.

ಸಕ್ಕರೆ, ಉಪ್ಪು, ಆಹಾರಧಾನ್ಯಗಳನ್ನು 1, 2, 5, 10 ಕಿಲೊ ಅಳತೆಯ ಆಕರ್ಷಕ ಪ್ಲಾಸ್ಟಿಕ್ ಬ್ಯಾಗ್‌ಗಳಲ್ಲಿ ಪ್ಯಾಕ್ ಮಾಡಿ, ಶ್ರೇಷ್ಠ ಗುಣಮಟ್ಟದವು ಎಂದು ಬಿಂಬಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುವ ತಂತ್ರ ಧಾರಾಳವಾಗಿ ನಡೆಯುತ್ತಿದೆ. ಗ್ರಾಹಕರು ಕೂಡ ಇವುಗಳನ್ನೇ ಹೆಚ್ಚಾಗಿ ಖರೀದಿಸುತ್ತಿದ್ದಾರೆ.

ಶಾಲಾ ಮಕ್ಕಳು ಊಟ, ಉಪಾಹಾರದಂತಹ ಖಾದ್ಯ ಪದಾರ್ಥಗಳನ್ನು ಪ್ಲಾಸ್ಟಿಕ್ ಬ್ಯಾಗುಗಳಲ್ಲಿ ತರುತ್ತಿದ್ದಾರೆ. ಬಿಸಿ ಪದಾರ್ಥಗಳನ್ನು ಪ್ಲಾಸ್ಟಿಕ್ ಬ್ಯಾಗಿನಲ್ಲಿ ಇಡುವುದರಿಂದ ಪ್ಲಾಸ್ಟಿಕ್ ಕಣಗಳು ಅಧಿಕ ಪ್ರಮಾಣದಲ್ಲಿ ಆಹಾರವನ್ನು ಸೇರಿಕೊಳ್ಳುವ ಸಾಧ್ಯತೆ ಇರುತ್ತದೆ. ಹೋಟೆಲ್‌ಗಳಿಂದ ತರಿಸುವ ಪದಾರ್ಥಗಳು ಪ್ಲಾಸ್ಟಿಕ್ ಚೀಲದಲ್ಲಿಯೇ ಬರುತ್ತವೆ.

ಹಿಂದೆ ಸಂತೆ, ಪೇಟೆಯಿಂದ ಆಹಾರ ಪದಾರ್ಥಗಳನ್ನು ಖರೀದಿಸಿ ತರಲು ಬಟ್ಟೆಯಿಂದ ತಯಾರಿಸಿದ ಕೈಚೀಲಗಳನ್ನು ಬಳಸುತ್ತಿದ್ದರು. ಈಗ ಅವು ಮಾಯವಾಗಿ ಆ ಜಾಗಗಳನ್ನು ಪ್ಲಾಸ್ಟಿಕ್ ಬ್ಯಾಗುಗಳು ಆವರಿಸಿವೆ. ಕಡಿಮೆ ಮೈಕ್ರಾನ್‌ನ ಪ್ಲಾಸ್ಟಿಕ್ ಬ್ಯಾಗ್ ನಿಷೇಧದ ಕಾರಣದಿಂದ ಸ್ವಲ್ಪಮಟ್ಟಿಗೆ ಇವುಗಳ ಬಳಕೆ ಕಡಿಮೆ ಆಗಿದೆಯಾದರೂ ಸಂಪೂರ್ಣ ನಿಯಂತ್ರಣ ಸಾಧ್ಯವಾಗಿಲ್ಲ. ಪ್ಲಾಸ್ಟಿಕ್ ಬಳಕೆಯಿಂದ ಉಂಟಾಗುವ ತೊಂದರೆಗಳ ಬಗ್ಗೆ ಎಲ್ಲರಿಗೂ ಅರಿವಿದ್ದರೂ ದೃಢ ನಿರ್ಧಾರದ ಕೊರತೆಯಿಂದ ಬಳಕೆ ಕಡಿಮೆಯಾಗುತ್ತಿಲ್ಲ.

ಈಚೆಗೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ, ಕಂಪಾರ್ಟ್‌ಮೆಂಟಿನಲ್ಲಿ ದೋಸೆ ಖರೀದಿಸಿದೆ. ರಟ್ಟಿನ ಬಾಕ್ಸ್‌ನಲ್ಲಿ ದೋಸೆಯನ್ನು ಪ್ಯಾಕ್ ಮಾಡಲಾಗಿತ್ತು. ಆದರೆ ಸಾಂಬಾರ್, ಚಟ್ನಿಯನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ಇಡಲಾಗಿತ್ತು. ಬಿಸಿ ದೋಸೆಯನ್ನು ಮಿಂಚುವ ಪ್ಲಾಸ್ಟಿಕ್ ಕಾಗದದಲ್ಲಿ ಸುತ್ತಲಾಗಿತ್ತು. ಕಾಗದದ ವರ್ಣವು ದೋಸೆಗೆ ಅಂಟಿಕೊಂಡಿದ್ದು ಕಾಣಿಸುತ್ತಿತ್ತು. ತಿನ್ನುವುದಕ್ಕೆ ಮನಸ್ಸಾಗಲಿಲ್ಲ. ಇಂತಹ ಸಂದರ್ಭಗಳಲ್ಲಿ, ಪ್ಲಾಸ್ಟಿಕ್‌ನಿಂದ ದೂರ ಇರಲು ಬಯಸುವವರು ಉಪವಾಸ ಮಾಡಬೇಕಾದ ಪರಿಸ್ಥಿತಿ ಬಂದಿದೆ.



ಇತ್ತೀಚಿನ ದಿನಗಳಲ್ಲಿ ಪ್ಲಾಸ್ಟಿಕ್ ಬಳಕೆ ವಿಪರೀತ ಹೆಚ್ಚಾಗತೊಡಗಿದೆ. ಪ್ಲಾಸ್ಟಿಕ್‌ನಲ್ಲಿ ಅನೇಕ ರಾಸಾಯನಿಕ ಮತ್ತು ಅಪಾಯಕಾರಿ ಪದಾರ್ಥಗಳು ಇರುತ್ತವೆ. ಇವು ಮಣ್ಣಿನಲ್ಲಿ ಕರಗದೆ ಸಣ್ಣಸಣ್ಣ ಕಣಗಳಾಗಿ ಬದಲಾಗುತ್ತವೆ. ಅತಿ ಸೂಕ್ಷ್ಮ ಕಣಗಳನ್ನು ಮೈಕ್ರೊಪ್ಲಾಸ್ಟಿಕ್ ಕಣಗಳೆಂದು ಕರೆಯಲಾಗುತ್ತದೆ. ಇವು ಪರಿಸರ, ಜೀವಿಗಳು, ಮಣ್ಣು, ನೀರಿನ ಮೇಲೆ ದುಷ್ಪರಿಣಾಮ ಬೀರುತ್ತವೆ.

ಜನ ಸೇವಿಸುವ ಆಹಾರ ಮತ್ತು ಆಹಾರಧಾನ್ಯಗಳ ಪ್ಯಾಕಿಂಗ್ ಅತ್ಯಂತ ಮುಖ್ಯವಾದ ಕ್ರಿಯೆ. ಪ್ಲಾಸ್ಟಿಕ್ ಹೊರತಾಗಿ ಉತ್ತಮ ಪರ್ಯಾಯ ಪ್ಯಾಕಿಂಗ್ ಪದ್ಧತಿಗಳಿವೆ. ಸಾಂಪ್ರದಾಯಿಕ ಸರಳ ವಿಧಾನಗಳಿವೆ. ಅವುಗಳನ್ನು ಅನುಸರಿಸಲು ಜನ ಗಟ್ಟಿ ಮನಸ್ಸು ಮಾಡಬೇಕು. ಹಾಗೆಯೇ ಸರ್ಕಾರ ಕಟ್ಟುನಿಟ್ಟಿನ ನಿಯಮಗಳನ್ನು ಅನುಷ್ಠಾನಕ್ಕೆ ತರುವುದು ಅವಶ್ಯ.